ಇದ್ದುದೇ ಇಲ್ಲಿ, ನಗರದಲ್ಲಿದ್ದೇನೆಂದು ಸುಳ್ಳು ಹೇಳಿ ಮದುವೆಯಾಗಿದ್ದಾನೆ' ಅಂದುಕೊಂಡರೆ! ಫಾರಿನ್ನಿನ ಆಸೆ ತೋರಿಸಿ ಮದುವೆಯಾಗಿ, ಇಲ್ಲಿ ನೋಡಿದರೆ ಮತ್ತೇನೋ ಎಡವಟ್ಟಿರುವಂಥ ಮೋಸದ ಮದುವೆಗಳ ಹಲವಾರು ಕಥೆಗಳಲ್ಲಿ ತನ್ನದೂ ಒಂದು ಸೇರ್ಪಡೆಯಾಗಿಬಿಟ್ಟರೆ ಎನ್ನುವ ಆತಂಕ ಆತನನ್ನು ಕಾಡತೊಡಗಿತು.

ಇಂಥ ಸಂದಿಗ್ಧದಲ್ಲಿ ಕಸಬಾಕ್ಕೆ ಬಂದಿಳಿದ ಚಂದ್ರಕಾಂತ. ರಾಜಕೀಯವಾಗಿ ಬಹಳೇ ಗಮನಸೆಳೆಯುವ ಊರು ಅದು. ಪಕ್ಕದ ದೇಶವಾದ ದುಬಾಯಿಯ ಗಡಿಗೆ ಅಂಟಿಕೊಂಡಿರುವ ಕಸಬಾ ತನಗೇ ಸೇರಬೇಕೆಂಬುದು ದುಬಾಯಿಯ ಅನಾದಿ ಕಾಲದ ಬೇಡಿಕೆ. ಆದರೆ ದುಬಾಯಿಯ ಈ ಒತ್ತಡಕ್ಕೆ ಓಮಾನ್ ಮಣಿಯದಿರಲು ಅದರ ಭೌಗೋಳಿಕ ನೆಲೆಯೇ ಕಾರಣ. ಇರಾನ್ ಇರಾಕ್ ಸೇರಿದಂತೆ ಹಲವಾರು ಗಲ್ಫ್ ರಾಷ್ಟ್ರಗಳಿಗೆ ಸಮುದ್ರ ಮಾರ್ಗವಾಗಿ ಸಂಪರ್ಕ ಕಲ್ಪಿಸುವ ಆಯಕಟ್ಟಿನ ಜಾಗದಲ್ಲಿದ್ದ ಕಸಬಾ ಯಾವುದೇ ದೇಶಕ್ಕಾದರೂ ವಾಣಿಜ್ಯ ಹಾಗೂ ಮಿಲಿಟರಿ ದೃಷ್ಟಿಯಿಂದ ಬಹಳೇ ಪ್ರಮುಖ ಅನ್ನಿಸಬಹುದಾದ ಸ್ಥಳ. ಹೀಗಾಗಿ ಅದರಮೇಲಿನ ತನ್ನ ಹಕ್ಕನ್ನು ಪ್ರತಿಪಾದಿಸಿಕೊಂಡೇ ಬಂದಿತ್ತು ಓಮಾನ್. ಹಾಗೂ ಇಂಥದೇ ಒಂದು ಉದ್ದೇಶದ ಹಿನ್ನೆಲೆಯಲ್ಲೇ ಅಲ್ಲಿ ಈಗಾಗಲೇ ಇರುವ ಸಣ್ಣ ಬಂದರನ್ನು ವಿಸ್ತರಿಸಿ ಅದನ್ನು ತನ್ನ ಮಿಲಿಟರಿ ನೆಲೆಯಾಗಿಸುವ ಕೆಲಸ ಶುರುಮಾಡಿತ್ತು.

ಆ ಊರನ್ನು ನೋಡಿ ಮತ್ತೂ ನಿರಾಶೆಯಾಗಿ ಹೋಯಿತು ಚಂದ್ರಕಾಂತನಿಗೆ. ಇಲ್ಲಿ ಚೇತನಾಳನ್ನು ಕರೆದುಕೊಂಡು ಬಂದರೆ ಆಕೆ ಹೇಗೆ ಜೀವನ ಮಾಡುತ್ತಾಳೋ ಎಂದು ಚಿಂತೆಯಾಯಿತು. ಹಾಗಂತ, ಮದುವೆಯಾಗಿ ಹೆಂಡತಿಯನ್ನು ತವರಲ್ಲೇ ಬಿಟ್ಟು ದೇಶಾಂತರಗಳಿಗೆ ಕೆಲಸಕ್ಕೆಂದು ಹೊರಡುವ ಸಿದ್ಧಾಂತದ ಕಡು ವಿರೋಧಿ ಆತ. ಆಗಿನ್ನೂ ವಾಟ್ಸ್ಆ್ಯಪು, ಫೇಸ್‌ಬುಕ್ಕುಗಳ ಕಾಲ ಶುರುವಾಗಿರಲಿಲ್ಲ. ಮೊಬೈಲ್ ಫೋನ್ ಕೂಡ ಕೇವಲ ಸಿರಿವಂತರ ಶೋಕಿಗಷ್ಟೇ ಸೀಮಿತವಾಗಿತ್ತು. ಮಸ್ಕತ್ತಿಗೆ ಹಿಂದಿರುಗಿದ ನಂತರದ ಘಟನೆಗಳು, ಕಸಬಾ ಊರಿನ ವಿವರಗಳನ್ನೆಲ್ಲ ತಿಳಿಸಿ ಚೇತನಾಳಿಗೆ ಸುದೀರ್ಘ ಪತ್ರ ಬರೆದ ಚಂದ್ರಕಾಂತ. ಆದಾಗ್ಯೂ ಆಕೆ ಅಲ್ಲಿ ವಾಸಿಸಲು ಅಂಥ ತೊಂದರೆಯೇನೂ ಇಲ್ಲವೆಂದೂ, ಭಾರತೀಯರನ್ನೂ ಒಳಗೊಂಡಂತೆ ಅನೇಕ ಕುಟುಂಬಗಳು ಅಲ್ಲಿ ವಾಸವಿರುವುದಾಗಿ ತಿಳಿಸಿದ. ತನಗೆ ಕಂಪನಿ ಕಸಬಾಕ್ಕೆ ಹೋಗುವಂತೆ ನೀಡಿದ ಆದೇಶದ ಝೆರಾಕ್ಸ್ ಪ್ರತಿಯನ್ನು ಪತ್ರದೊಂದಿಗೆ ಲಗತ್ತಿಸಲು ಮರೆಯಲಿಲ್ಲ.

★★★

ಕಸಬಾಕ್ಕೆ ಬಂದಮೇಲೆ – ಹೊಸ ಊರು, ಹೊಸ ಪರಿಸರವನ್ನು ಅನುಭವಿಸುವ ಶುರುವಾತಿನ ಭಯ ಹಾಗೂ ಪುಳಕ ಬಲು ಬೇಗನೆ ಮಾಸಿಹೋಯಿತು ಚೇತನಾಳಿಗೆ. ದಿನಗಳೆದಂತೆ ಬೇಸರ ಆವರಿಸಿಕೊಳ್ಳತೊಡಗಿತು. ಹಾಗಂತ ಆಕೆಗೆ ಕಸಬಾದ ಮೇಲಾಗಲೀ, ಅಲ್ಲಿಗೆ ಕರೆತಂದ ಚಂದ್ರಕಾಂತನ ಮೇಲಾಗಲೀ ಯಾವುದೇ ದೂರುಗಳಿರಲಿಲ್ಲ. ಅಷ್ಟಕ್ಕೂ ನಗರದಲ್ಲೇನೂ ಹುಟ್ಟಿ ಬೆಳೆದವಳಲ್ಲ ಆಕೆ. ಮಲೆನಾಡಿನ ಹಳ್ಳಿಯವಳು. 'ಮಸ್ಕತ್ತಿನಲ್ಲಾದರೆ ಹಾಗಿತ್ತುಹೀಗಿತ್ತು; ಇಲ್ಲಿ ಅವೆಲ್ಲ ಇಲ್ಲ' ಎಂದು ಪದೇ ಪದೇ ಚಂದ್ರಕಾಂತ ವರ್ಣಿಸುತ್ತ, ಆ ಮುಖೇನ ಮತ್ತೇನನ್ನೋ ಸಮರ್ಥಿಸಲು ಹೊರಡುತ್ತಿದ್ದನಾದರೂ, ಅವ್ಯಾವುದೂ ಆಕೆಯ ಮೇಲೆ ಅಂಥ ಪ್ರಭಾವವನ್ನೇನೂ ಬೀರುತ್ತಿರಲಿಲ್ಲ. 'ಇಲ್ಲೇನೂ ತೊಂದರೆಯಿಲ್ಲವಲ್ಲ' ಎನ್ನುವ ಭಾವದಲ್ಲೇ ಆಕೆ ಇರುತ್ತಿದ್ದುದು ಚಂದ್ರಕಾಂತನಿಗೆ 'ಪಾಪ ಈಕೆ' ಎನ್ನಿಸುವುದರ ಜೊತೆಗೇ ಒಂದು ಮಟ್ಟಿನ ಸಮಾಧಾನವನ್ನೂ ನೀಡುತ್ತಿತ್ತು.